ಆ ಕಿಶೋರಿಗೆ. ಆದರೆ ನಿನಗದಾವುದರ ಚಿಂತೆಯೂ ತಟ್ಟುವುದಿಲ್ಲ. ಓ ಪ್ರಾಯದ ಹುಡುಗನೇ, ನೀನೆಷ್ಟು ಅದೃಷ್ಟವಂತ!

ಪುರುಷ ಏನು ಮಾಡಿದರೂ, ಹೇಗೆ ನಡೆದುಕೊಂಡರೂ ಸಮಾಜ ಪ್ರಶ್ನೆ ಮಾಡುವುದಿಲ್ಲ. ನೀನು ಎಲ್ಲಿಗೆ, ಯಾರದೇ ಸಂಗಡದಲ್ಲಿ, ಎಷ್ಟು ಹೊತ್ತಲ್ಲಿ ಬೇಕಾದರೂ ಓಡಾಡುವ ಸ್ವಾತಂತ್ರ್ಯವಿದೆ. ಆದರೆ ಹೆಣ್ಣುಮಕ್ಕಳಿಗೆ ಉಡುಪಿನಲ್ಲೇ ನಿರ್ಬಂಧವಿದೆ. ಮೈತುಂಬ ಬಟ್ಟೆ ತೊಟ್ಟಿದ್ದರೂ ಕಾಮಾಂಧರ ಕಣ್ಣುಗಳ ಸ್ಕ್ಯಾನಿಂಗ್ ತಪ್ಪುವುದಿಲ್ಲ.

ಇನ್ನು ಸಾಂಗತ್ಯದ ವಿಷಯ. ನೀನಾಗಿಯೇ ಅವಳನ್ನು ತೊರೆದರೂ ಕಾರಣಾಂತರಗಳಿಂದ ಅವಳೇ ನಿನ್ನಿಂದ ದೂರಾದರೂ ಸಮಾಜ ಬೆಟ್ಟು ಮಾಡುವುದು ಹೆಣ್ಣಿನತ್ತಲೇ. ಕುಹಕದ ನೋಟಗಳಿಗೆ ಗುರಿಯಾಗಿ, ಕಾಮಾಂಧ ಕಣ್ಣುಗಳಿಗೆ ಬಲಿಯಾಗಿ ಹಿಂಸೆಯ ಬಾಳನ್ನಪ್ಪಿ ನಡೆಯಬೇಕಾದುದು ಅನಿವಾರ್ಯವಾಗುತ್ತದೆ. ನೀನು ಮಾತ್ರ ಬಿಡುಬೀಸಾಗಿ ಮತ್ತೊಂದು ಹೆಣ್ಣಿನ ಸಾಂಗತ್ಯದಲ್ಲಿ ಮೈಮರೆಯುತ್ತೀಯ. ನಿನಗೆ ಯಾವುದೇ ರೀತಿಯ ಕಳಂಕದ ಹಂಗಿಲ್ಲ. ಓ ಗಂಡಸೇ, ನೀನೆಷ್ಟು ಅದೃಷ್ಟವಂತ!



ಮದುವೆ ಸಮಯದಲ್ಲಿ ಹೆಣ್ಣಿನ ಕಡೆಯವರು ನಿನ್ನ ಬಣ್ಣ–ರೂಪವನ್ನು ನೋಡುವುದಿಲ್ಲ. ನಿನಗೊಂದು ಒಳ್ಳೆಯ ಕೆಲಸವಿದ್ದರಾಯಿತು. ಆದರೆ ನೀನು ಮದುವೆಯಾಗುವ ಹೆಣ್ಣು ಮಾತ್ರ ನಿನ್ನ ಹಾಗೂ ನಿನ್ನ ಮನೆಯವರ ಕಣ್ಣಿಗೆ ರೂಪವತಿಯಾಗಿರಬೇಕು. ಬಳುಕುವ ಬಳ್ಳಿಯಾಗಿ ಬೆಳದಿಂಗಳ ಬಾಲೆಯಂತಿರಬೇಕು. ನಿನ್ನನ್ನು ಮದುವೆಯ ಹೆಸರಲ್ಲಿ ಕಟ್ಟಿಕೊಂಡ ಕ್ಷಣದಿಂದ ಹೆಣ್ಣಿನ ವೇಷಭೂಷಣ ಬದಲಾಗಿಬಿಡುತ್ತೆ. ನಿನ್ನ ಹೆಸರಿನಲ್ಲೇ ಅವಳ ಕುಂಕುಮ, ತಾಳಿ, ಕೈಬಳೆಗಳು, ಕಾಲುಂಗುರ ರಾರಾಜಿಸುತ್ತವೆ. ಆದರೆ ನಿನಗೆ ಇದಾವುದರ ಗೊಡವೆಯೂ ಇಲ್ಲ. ಓ ಮದುಮಗನೇ, ನೀನೆಷ್ಟು ಅದೃಷ್ಟವಂತ!

ನಿನ್ನಂತೆಯೇ ನಿನ್ನ ಮಡದಿ ಕೂಡ ಹೊರಗೆ ದುಡಿಯಬೇಕು ಎಂಬ ಹಂಬಲ ಹೊತ್ತಿರುತ್ತಾಳೆ. ತನ್ನ ಓದು, ವಿದ್ಯಾರ್ಹತೆ, ಜ್ಞಾನ ವ್ಯರ್ಥವಾಗಬಾರದು ಎಂಬುದು ಅವಳ ಇಂಗಿತ. ತಾನೂ ಗಂಡಿನೊಂದಿಗೆ ಸಮಹೆಜ್ಜೆ ಹಾಕಬೇಕೆಂಬ ಹಂಬಲ ಅವಳಿಗೆ. ಆದರೆ ಮನೆ ತೂಗಿಸಲು ನಿನ್ನೊಬ್ಬನ ದುಡಿಮೆಯೇ ಸಾಕೆಂದು ಅವಳ ಆಸೆಗೆ ಕಲ್ಲು ಹಾಕುತ್ತೀಯ. ಅವಳ ಕಣ್ಣಿನಲ್ಲಿ ಸೂಸುವ ನೂರಾಸೆಗಳನ್ನು ನೀನು ಕಾಣದಾಗುತ್ತೀಯ. ಅವಳನ್ನು ಬರೀ ನಿನ್ನ ಶೃಂಗಾರದ ಬೊಂಬೆಯನ್ನಾಗಿ ನೋಡುತ್ತೀಯ. ಓ ಗಂಡೇ, ನೀನು ಮಾಡುತ್ತಿರುವುದು ಸರಿಯೇ?

ನಿಮ್ಮಿಬ್ಬರ ಪ್ರೀತಿಯ ಸಂಕೇತವಾಗಿ ನಿನ್ನಾಕೆ ತಾಯಿಯಾಗುತ್ತಾಳೆ. ಮೊದಲ ಹಂತದಿಂದ ಮಗು ಹಡೆಯುವವರೆಗೂ ಆಕೆಯಲ್ಲಿ ದೈಹಿಕ–ಮಾನಸಿಕ ಬದಲಾವಣೆಗಳಾಗುತ್ತಾ ಹೋಗುತ್ತವೆ. ತನ್ನ ಆರೋಗ್ಯದ ವೈಪರೀತ್ಯಗಳನ್ನು ಅನುಭವಿಸುವ ಅವಳಿಗೇ ಗೊತ್ತು, ಸಂತಸದ ಕ್ಷಣಗಳಲ್ಲೂ ಅದೆಷ್ಟು ಸಂಕಟಗಳನ್ನು ಎದುರಿಸಬೇಕಾಗುತ್ತದೆ ಎಂದು. ಮಗು ಹಡೆಯುವಾಗ ಅವಳು ಅನುಭವಿಸುವ ನೋವು, ವೇದನೆ ಯಾವ ಗಂಡೂ ಕಲ್ಪಿಸಿಕೊಳ್ಳಲಾಗುವುದಿಲ್ಲ. ಆಗಲೂ ಭಗವಂತ ನಿನ್ನ ಕಡೆಯೇ. ನೀನು ನಿನ್ನ ಮಡದಿಗೆ ಎಷ್ಟೇ ಬೆಂಗಾವಲಾಗಿ ನಿಂತರೂ, ಓರ್ವ ತಾಯಿ ಅನುಭವಿಸುವ ದೈಹಿಕ ಯಾತನೆಯಿಂದ ನೀನು ಸಂಪೂರ್ಣ ಮುಕ್ತ. ಓ ತಂದೆಯೇ, ನೀನೆಷ್ಟು ಅದೃಷ್ಟವಂತ!

ಮಡದಿಯು ತನ್ನ ಮಗುವಿನ ಲಾಲನೆ ಪಾಲನೆ ಮಾಡುವಲ್ಲೇ ಕಳೆದುಹೋಗಿರುತ್ತಾಳೆ. ರಚ್ಚೆ ಹಿಡಿದ ಮಗುವನ್ನು ಸಮಾಧಾನಪಡಿಸಲು ರಾತ್ರಿ ಹೊತ್ತು ನಿದ್ದೆಗೆಡುವ ಆಕೆಗೆ ನಿನ್ನ ಗೊರಕೆ ಸದ್ದು ಕಿರಿಕಿರಿಯೆನಿಸಿದರೂ ಸಹಿಸುತ್ತಾಳೆ. ಬೆಳಗಿನ ಉಪಹಾರ, ಊಟದ ಡಬ್ಬಿಯನ್ನು ಕಟ್ಟುತ್ತಲೇ ತನ್ನ ಕೂಸನ್ನು ಶಾಲೆಗೆ ಹೊರಡಿಸಲು ತಯಾರು ಮಾಡುತ್ತಾಳೆ. ನೀನು ಊರಿನಲ್ಲಿಲ್ಲದ ಸಮಯದಲ್ಲಿ ಮನೆಯ ಹಾಗೂ ಮಕ್ಕಳ ಸಂಪೂರ್ಣ ಜವಾಬ್ದಾರಿ ಒಂಟಿಯಾಗಿ ನಿಭಾಯಿಸುವುದು ತುಸು ಹೊರೆ ಅನಿಸಿದರೂ ಎಲ್ಲವನ್ನೂ ಸಂಯಮದಿಂದಲೇ ಮಾಡುತ್ತಾಳೆ.

ಸಮಯದ ಪರಿವೆಯಿಲ್ಲದೆ, ನಿಂತ ಕಾಲಲ್ಲೇ ಎಲ್ಲೆಂದರಲ್ಲಿಗೆ ನೀನು ಹೊರಟುಬಿಡಬಹುದು. ಸ್ನೇಹಿತರೊಡಗೂಡಬಹುದು, ಸಮಾರಂಭಗಳಿಗೆ ಹಾಜರಾಗಬಹುದು. ನಿನಗೆ ಸಂಸಾರದ ಸುಖದ ಜೊತೆ ಹೊರಗಿನ ಪ್ರಪಂಚವನ್ನು ಆಸ್ವಾದಿಸುವ ಎಲ್ಲಾ ಅನುಕೂಲ ಇರುತ್ತದೆ. ಆದರೆ ಆಕೆ ತನ್ನ ಜೀವನದ ಈ ಪ್ರಮುಖ ಘಟ್ಟದಲ್ಲಿ ತನ್ನ ಪುಟ್ಟ ಸಂಸಾರವನ್ನು ನಿಭಾಯಿಸುವ ಭರದಲ್ಲಿ ತನ್ನ ಸ್ನೇಹಿತೆಯರು, ಬಂಧುಗಳೊಡನೆ ಸಂಪರ್ಕ ಇಟ್ಟುಕೊಳ್ಳಲು ಹರಸಾಹಸ ಮಾಡಬೇಕಾದೀತು. ಸಂಸಾರದ ನೌಕೆಯಲ್ಲೇ ಮುಳುಗಿರುವ ಆಕೆಗೆ ಬಾಹ್ಯ ಪ್ರಪಂಚದ ಕೊಂಡಿ ತಾತ್ಕಾಲಿಕವಾದರೂ ಕಳಚಿಹೋಗಿರುತ್ತದೆ. ಆಕೆಗೆ ಹಲವಾರು ಸಂದರ್ಭದಲ್ಲಿ ಸಂಸಾರದ ಬಂಧೀಖಾನೆಯಲ್ಲಿ ಇರುವಂತೆ ಭಾಸವಾಗಬಹುದು.

ಉದರದಲ್ಲಿ ಮಗುವನ್ನು ಹೊತ್ತು ಹೆತ್ತು ಬೆಳೆಸುವುದು ತಾಯಿಯೇ ಆದರೂ, ಆ ಮಗುವಿನ ಹೆಸರಿನ ಮುಂದೆ ತಂದೆಯ ಹೆಸರೇ ಅಂಟಿಕೊಳ್ಳುವುದು. ಓ ತಂದೆಯೇ, ನೀನೆಷ್ಟು ಅದೃಷ್ಟವಂತನಲ್ಲವೇ?

ನೀವಿಬ್ಬರೂ ಈಗ ಮಧ್ಯವಯಸ್ಸು ಮೀರಿದ್ದೀರಿ. ಮಕ್ಕಳ ಮದುವೆ ಮಾಡಿ ಅವರಿಂದ ದೂರವಾಗುವ ನೋವನ್ನು ಅನುಭವಿಸುವುದು ಹೆಚ್ಚಾಗಿ ನಿನ್ನ ಮಡದಿಯೇ. ದುಃಖ ಕಡಿಮೆ ಮಾಡಿಕೊಳ್ಳಲು ನೀನು ನಿನ್ನ ಸ್ನೇಹಿತರೊಡಗೂಡಿ ಕಾಲಕಳೆಯಬಹುದು. ಆದರೆ ಆಕೆ ತನ್ನ ಮಕ್ಕಳ ಅಗಲಿಕೆಯ ದುಃಖವನ್ನು ಅಪ್ಪಿಕೊಂಡು ಮತ್ತಷ್ಟೂ ಕುಗ್ಗುವಳು.

ಹೆಣ್ಣು ಇರುವುದೇ ಮನೆಮಂದಿಯ ಆರೈಕೆ ಮಾಡಲು ಎಂದು ನಮ್ಮ ಸಮಾಜ ತಲೆತಲಾಂತರದಿಂದ ತೀರ್ಮಾನಿಸಿದೆ. ನಿನಗೆ ವಯಸ್ಸಾದ ಹಾಗೆ ಆಕೆಗೂ ವಯಸ್ಸಾಗಿರುತ್ತದಲ್ಲವೇ. ನೀನು ನಿನ್ನ ದುಡಿಮೆಯಿಂದ ನಿವೃತ್ತಗೊಂಡು ಸ್ವಲ್ಪ ನೆಮ್ಮದಿಯ ಉಸಿರು ಬಿಡಬಹುದು. ಆದರೆ ನಿನ್ನಾಕೆ? ಆಕೆಯೂ ತನ್ನ ಮನೆಯ ಜವಾಬ್ದಾರಿಯಿಂದ ನಿವೃತ್ತಗೊಳ್ಳಬಹುದೇ? ಆಕೆಗೆ ಎಷ್ಟೇ ಮುಪ್ಪಡರಿದ್ದರೂ ನಿನ್ನ ಆರೋಗ್ಯದ ಕಾಳಜಿ ಮಾಡುತ್ತಾ, ನಿನ್ನ ಬೇಕು–ಬೇಡಗಳನ್ನು ಪೂರೈಸುತ್ತಾ, ಅಡುಗೆ ಮಾಡುತ್ತಾ, ಕಸ–ಮುಸುರೆ ತೊಳೆಯುವುದು ತಪ್ಪುವುದಿಲ್ಲ ಅಲ್ಲವಾ? ಓ ಮುಪ್ಪಡರಿದ ಗಂಡಸೇ, ನೀನೇ ಅದೃಷ್ಟವಂತ!

ನೀನು ಇಹಲೋಕ ತ್ಯಜಿಸಿದ ಮೇಲೆ, ಹೆಣ್ಣು ತನ್ನ ಮುತ್ತೈದೆತನವನ್ನು ಕಳೆದುಕೊಂಡು ನಿನ್ನ ಹೆಸರಿನಲ್ಲಿ ಶೃಂಗರಿಸಿಕೊಳ್ಳುತ್ತಿದ್ದ ಕುಂಕುಮ ಬಳೆಗಳನ್ನು ತೆಗೆಯುತ್ತಾಳೆ. ಆದರೆ ನಿನ್ನ ಸಂಗಾತಿ ಮಡಿದರೆ ಇಂಥಹ ಯಾವ ನಿಬಂಧನೆಗಳೂ ಇಲ್ಲದ ಮುಕ್ತ ಜೀವನ ನಿನದಾಗುತ್ತದೆ. ಓ ವಿಧುರನೇ ಈಗಲೂ ನೀನೇ ಅದೃಷ್ಟವಂತ! ■